157, SL.no:-76 17.12.2026

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) ಇವರು ಶೂನ್ಯ ವೇಳೆ ಪ್ರಶ್ನೆಗೆ ಉತ್ತರಿಸುವ ಬಗ್ಗೆ.

**ವಿಷಯ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:16.12.2025ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಚಳಿಗಾಲದಲ್ಲಿ ಮೇಷ್ಟ್ರೀಗೆ ಮೊಟ್ಟೆ ಬಿಸಿ" ಎಂಬ ವಿಷಯ ಪ್ರಕಟವಾಗಿದ್ದು, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಚಳಿಗಾಲದಲ್ಲಿ ಮೊಟ್ಟೆ ಬಿಸಿ ಜೇಬು ಸುಡುತ್ತಿದೆ. ರಾಜ್ಯ ಸರ್ಕಾರ ಮೊಟ್ಟೆಗೆ ರೂ. 6.00 ಮಾತ್ರ ನೀಡುತ್ತಿದ್ದು, ಮಾರುಕಟ್ಟೆಯಲ್ಲಿ ಮೊಟ್ಟೆ ಬೆಲೆ ರೂ.8 ಆಗಿದೆ.ಜತೆಗೆ ಅಡುಗೆಯವರಿಗೆ ಮತ್ತು ಮೊಟ್ಟೆ ಸುಲಿಯುವವರಿಗೂ ಹೆಡ್ ಮೇಷ್ಟ್ರು ದುಡ್ಡುಕೊಡುವಂತಾಗಿದೆ. ಪ್ರತಿ ಮೊಟ್ಟೆಗೆ ಶಾಲೆಯ ಮುಖ್ಯ ಶಿಕ್ಷಕರಿಗೆ ರೂ. 2.80 ರೂ ನಿಂದ 3 ರೂ ವರೆಗೆ ಹೆಚ್ಚುವರಿ ಖರ್ಚು ಬೀಳುತ್ತಿದೆ. ಕನಿಷ್ಟ 100 ಮಕ್ಕಳಿರುವ ಶಾಲೆಯಲ್ಲಿ ತಿಂಗಳಿಗೆ 9 ರಿಂದ 10 ಸಾವಿರ ಮುಖ್ಯ ಶಿಕ್ಷಕರ ಜೇಬಿಗೆ ಕತ್ತರಿ ಬೀಳುತ್ತಿದೆ.

ಮುಖ್ಯ ಶಿಕ್ಷಕರಿಗೆ ಮಾಸಿಕ ಸರಾಸರಿ 50-60 ಸಾವಿರ ರೂ ನಿವ್ವಳ ಸಂಬಳ ಸಿಗುತ್ತದೆ (ಎಲ್ಲಾ ಕಡಿತವಾಗಿ ಸಿಗುವ ಟೆಕ್ ಹೋಂ ಸ್ಯಾಲರಿ) ಇದರಲ್ಲಿ ರೂ. 10.000 ಮೊಟ್ಟೆಗೆ ಕಳೆದುಕೊಂಡರೆ ಕುಟುಂಬ ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ರಾಜ್ಯ ಸರ್ಕಾರವು ಮೊಟ್ಟೆಗೆ ರೂ. 6 ನೀಡುತ್ತಿದೆ. 6 ರೂ ಮೊಟ್ಟೆಖರೀದಿಗೆ ಅಲ್ಲ, 5.20 ರೂ ಮೊಟ್ಟೆಗೆ.50 ಪೈಸೆ ಅಡುಗೆ ಅನಿಲ ಬಳಕೆಗೆ ಹಾಗೂ 30 ಪೈಸೆ ಮೊಟ್ಟೆ ಸುಲಿಯುವವರಿಗೆ ನೀಡಬೇಕೆಂದು ಸರ್ಕಾರದ 6.00 ವಿಂಗಡಣೆಯ ಲೆಕ್ಕ. ಆದರೆ 8 ರೂಪಾಯಿ ಮೊಟ್ಟೆಯೇ ಆಗಿರುವಾಗ ಅಡುಗೆ ಅನಿಲ ಮೊಟ್ಟೆ ಸುಲಿಯುವವರ ಹಣ ನೀಡುವುದು ಹೇಗೆ ?

ಹೋಲ್‌ಸೇಲ್ ದರದಲ್ಲಿ ಮೊಟ್ಟೆ ಖರೀದಿಸುವುದು ಹಾಗೂ ಸಂಗ್ರಹಿಸಿಡಲಾಗದು. ಹೀಗಾಗಿ ಮೊಟ್ಟೆಗೆ ನೀಡುತ್ತಿರುವ ಹಣವನ್ನು ರೂ.9 ಕ್ಕೆ ಏರಿಸಬೇಕೆಂದು ಶಿಕ್ಷಕರು ಮನವಿ ಸಲ್ಲಿಸಿದ್ದಾರೆ. ಮಾರುಕಟ್ಟೆಗೆ ಅನುಗುಣವಾಗಿ ಮೊಟ್ಟೆ ದರವನ್ನು ಪರಿಷ್ಕರಿಸಬೇಕೆಂದು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:** ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಗೆ ರೂ.6/-ಗಳ ಒಂದು ದಿನದ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ. ಸದರಿ ಘಟಕ ವೆಚ್ಚದಲ್ಲಿ ಮೊಟ್ಟೆ ಖರೀದಿ ಮತ್ತು ಇತರೆ ವೆಚ್ಚಗಳಿಗೆ ಹಂಚಿಕೆ ಮಾಡಲಾದ ಮೊತ್ತದ ವಿವರ ಕೆಳಕಂಡಂತಿದೆ:

| ವೆಚ್ಚ ವಿವರ | ನಿಗದಿಪಡಿಸಲಾದ ಮೊತ್ತ ರೂಪಾಯಿಗಳಲ್ಲಿ |
|---|---|
| ಮೊಟ್ಟೆ ಖರೀದಿಗೆ | ರೂ.5/- |

| | |
|---|---|
| ಮೊಟ್ಟೆ ಬೇಯಿಸಲು ಇಂಧನ ವೆಚ್ಚ | ರೂ.0.50/- |
| ಬೇಯಿಸಿದ ಮೊಟ್ಟೆಯ ಸಿಪ್ಪೆಯನ್ನು ಸುಳಿಯಲು ನಿಗದಿಪಡಿಸಿದ ಮೊತ್ತ | ರೂ.0.30/- |
| ಸಾರಿಗೆ ವೆಚ್ಚ | ರೂ.0.20/- |

ಶಾಲೆಗಳಲ್ಲಿ ಬಿಸಿಯೂಟ ಸಿದ್ಧಪಡಿಸಲು ಮತ್ತು ಪೂರಕ ಪೌಷ್ಠಿಕ ಆಹಾರ ವಿತರಿಸಲು ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಅಡುಗೆ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಮಾತ್ರ ಮುಖ್ಯಶಿಕ್ಷಕರು/ ಶಿಕ್ಷಕರು ನೋಡಿಕೊಳ್ಳುತ್ತಾರೆ.

ಮೊಟ್ಟೆಯ ದರ ಮಾರುಕಟ್ಟೆಗಳಲ್ಲಿ ಏಕರೂಪವಾಗಿ ನಿಗದಿಯಾಗಿರುವುದಿಲ್ಲ. ಸ್ಥಳೀಯವಾಗಿ ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೊಟ್ಟೆಯ ದರದಲ್ಲಿ ಏರಿಳಿಕೆಯಾಗುತ್ತದೆ. ಆದಕಾರಣ ರಾಜ್ಯ ಸರ್ಕಾರದಿಂದ ಪೂರಕ ಪೌಷ್ಠಿಕ ಆಹಾರಗಳಾದ ಮೊಟ್ಟೆ/ಬಾಳೆಹಣ್ಣು ವಿತರಿಸಲು ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6/-ಗಳ ಘಟಕ ವೆಚ್ಚವನ್ನು ಮೇಲಿನಂತೆ ನಿಗದಿಪಡಿಸಿರುವುದು ಸೂಕ್ತವಾಗಿರುತ್ತದೆ.

ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ, ಪೋಷಕರು ಒಳಗೊಂಡು ರಚಿತವಾಗಿರುವ ಖರೀದಿ ಸಮಿತಿಯು ಶಾಲಾ ಮಕ್ಕಳಿಗೆ ವಿತರಿಸಬೇಕಾಗಿರುವ ಮೊಟ್ಟೆಗಳನ್ನು ಖರೀದಿಸುತ್ತದೆ. ಇಲಾಖೆಯು ನಿಗದಿಪಡಿಸಿದ ದರದ ಮಿತಿಯಲ್ಲಿಯೇ (ಒಬ್ಬ ವಿದ್ಯಾರ್ಥಿಗೆ ಒಂದು ದಿನಕ್ಕೆ ಘಟಕ ವೆಚ್ಚ ರೂ. 06/- ) ಖರೀದಿ ಮಾಡಿ ಸುರಕ್ಷಿತವಾಗಿ ಸಂಗ್ರಹಿಸಿ ಶಾಲಾ ಮಕ್ಕಳಿಗೆ ವಿತರಿಸುವ ವ್ಯವಸ್ಥೆ ಮಾಡಲಾಗಿದೆ.

ಪೂರಕ ಪೌಷ್ಠಿಕ ಆಹಾರ ಪದಾರ್ಥಗಳನ್ನು ಖರೀದಿಸುವಾಗ ಇಂಥವರಿಂದಲೇ ಖರೀದಿಸಬೇಕೆಂಬ ನಿಯಮಗಳಿಲ್ಲ. ಶಾಲಾ ಖರೀದಿ ಸಮಿತಿಯು ಈ ಸಂಬಂಧ ಇಲಾಖೆಯು ನೀಡಿದ ಮಾರ್ಗಸೂಚಿಯಂತೆ (SOP) ಕ್ರಮಕೈಗೊಂಡು ಮಾರುಕಟ್ಟೆಯಲ್ಲಿ, ರೈತರಿಂದ, ಸಗಟು ಮಾರಾಟಗಾರರಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗಳ ಘಟಕಗಳಿಂದ ಖರೀದಿಸಲು ಅವಕಾಶವಿದೆ.

ಪೂರಕ ಪೌಷ್ಠಿಕ ಆಹಾರ ವಿತರಣೆಗೆ ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಿರುವ ಘಟಕ ವೆಚ್ಚದಲ್ಲಿಯೇ ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರ ಪದಾರ್ಥಗಳನ್ನು ಖರೀದಿಸಲಾಗುತ್ತಿರುವುದರಿಂದ ಶಿಕ್ಷಕರಿಗೆ ಹೊರೆ ಉಂಟಾಗಿರುವುದಿಲ್ಲ. ಮೊಟ್ಟೆ ದರ ಹೆಚ್ಚಿಸುವ ಬಗ್ಗೆ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಬಾಕಿ ಇರುವುದಿಲ್ಲ.

**ಇಪಿ 140 ಎಂಎಂಎಸ್ 2025**

**(ಎಸ್.ಮಧುಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**